INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -4, July--August, 2024,
PageNo,64-69
Peer -Reviewed, Refereed Journal

# ಜಿ.ಎಸ್.ಶಿವರುದ್ರಪ್ಪ ಅವರ ದೃಷ್ಟಿಯಲ್ಲಿ ಸಾಮಾಜಿಕ ಮೌಲ್ಯಗಳು – ಒಂದು ಅವಲೋಕನ

ಸೌಮ್ಯ ಎಸ್.ಎಸ್..[1]

ಮೌಲ್ಯ ಎಂದರೆ ಸಾಮಾನ್ಯ ಅರ್ಥದಲ್ಲಿ ಬೆಲೆ ಕಟ್ಟುವಿಕೆ ಅಥವಾ ಬೆಲೆ ನಿರ್ಧರಿಸುವಿಕೆ ಆಗಿದೆ. ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಎಲ್ಲಾ ಆದರ್ಶಗಳಿಗೆ ಮೌಲ್ಯಗಳೆನ್ನುವುದು. ಒಬ್ಬ ವ್ಯಕ್ತಿಯಲ್ಲಾಗಲೀ ಅಥವಾ ವಸ್ತುವಿನಲ್ಲಿ ಇರುವ ಗುಣವು ಮಹತ್ವವುಳ್ಳದ್ದು, ಉಪಯುಕ್ತವುಳ್ಳದ್ದಾಗಿ ಮಾಡಿದರೆ ಅದನ್ನು ಮೌಲ್ಯ ಎಂದು ಕರೆಯುವರು. ಮೌಲ್ಯ ಎಂಬ ಪದವು ಇಂಗ್ಲೀಷಿನ 'Values' ಎಂಬ ಪದದಿಂದ ಬಂದಿದೆ. Values ಇದು ಲ್ಯಾಟಿನ್ ಭಾಷೆಯ Valere ಪದದಿಂದ ಬಂದಿದೆ.

ಮೌಲ್ಯಗಳಲ್ಲಿ ಅನೇಕ ವಿಧಗಳಿವೆ.

1. **ಧಾರ್ಮಿಕ ಮೌಲ್ಯ:** ಧರ್ಮ–ಸಮಾಜ–ವ್ಯಕ್ತಿ ಇವುಗಳ ನಡುವಿನ ಸಂಬಂಧ ಸಂಕೀರ್ಣವಾದದ್ದು ಮತ್ತು ಅವಿಚ್ಛಿನ್ನವಾದದ್ದು. ವ್ಯಕ್ತಿ ಕುಟುಂಬವಾಗಿ ಹಲವು ಕುಟುಂಬಗಳು ಸಮಾಜವಾಗಿ, ಸಮಾಜ ರಾಜ್ಯವಾಗಿ ಕೊನೆಗೆ ದೇಶವಾಗಿ, ದೇಶಗಳು ವಿಸ್ತೃತವಾಗಿ ಲೋಕವಾಗಿದೆ. ಅದೇ ಸಂದರ್ಭದಲ್ಲಿ ರೂಪುಗೊಳ್ಳುವ ಸಾಮಾಜಿಕ ನೀತಿ–ಮೌಲ್ಯಗಳ ಮುಂದೆ ಧಾರ್ಮಿಕ ಚೌಕಟ್ಟನ್ನು ಪಡೆದುಕೊಳ್ಳುತ್ತವೆ. ಇಂತಹ ನೀತಿ–ಮೌಲ್ಯಗಳು ಮತ್ತು ಧಾರ್ಮಿಕತೆ ಕಾಲ–ದೇಶ–ಸ್ಥಿತಿಗಳ ಪರಿಸರದಲ್ಲಿ ನಿರ್ಮಾಣವಾಗಿ ಅಯಾ ಕಾಲದ ಜನರ ನಂಬಿಕೆಯಾಗುತ್ತದೆ. ಮಾನವ ಕುಲದ ಹಿತಕಾಯುವ ಅಭಿಪ್ರಾಯ, ಅವಶ್ಯಕತೆಗಳನ್ನು ಪೂರೈಸುತ್ತದೆ.

2. **ಆರ್ಥಿಕ ಮೌಲ್ಯ:** ಜಿ.ಎಸ್.ಶಿವರುದ್ರಪ್ಪ ಅವರು ಸಾಹಿತ್ಯದಲ್ಲಿ ಆರ್ಥಿಕ ಮೌಲ್ಯಗಳನ್ನು ಕುರಿತು ನೋಡುವುದಾದರೆ ಕಾವ್ಯಪ್ರಯೋಜನಗಳನ್ನು ಹೇಳುವಾಗ ರಸಾನುಭವದ ಜೊತೆಗೆ, ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ಪುರುಷಾರ್ಥಗಳು ಸಾಧಿತವಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಹಾಗೆಯೇ ಕವಿಗೆ ಯಶಸ್ಸು, ಧನ ಸಂಪಾದನೆಯೂ ಮತ್ತು ಓದುಗರಿಗೆ ವ್ಯವಹಾರಜ್ಞಾನ, ಸದ್ಯಪರ ನಿವೃತ್ತಿ, ಉಪದೇಶ ಇವು ಲಭಿಸುತ್ತವೆ. ಸಾಹಿತ್ಯ ಒಂದು ಜವಾಬ್ದಾರಿಯು ಉಂಟೆಂಬುದನ್ನು ಗುರುತಿಸಬಹುದು.

---

[1]. **ಸಂಶೋಧಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು**

**3. ಸಾಮಾಜಿಕ ಮೌಲ್ಯಗಳು:** ಒಬ್ಬ ವ್ಯಕ್ತಿ ಸಮಾಜದಲ್ಲಿನ ಇತರರೊಡನೆ ಬೆರೆತು ಕೂಡಿ ಬಾಳುವುದರಿಂದಾಗಿ ಅವನ ಗುಣಗಳು ರೂಪುಗೊಳ್ಳುತ್ತವೆ. ವ್ಯಕ್ತಿಯು ಕುಟುಂಬ ತನ್ನ ಸುತ್ತಮುತ್ತಲಿನ ಪರಿಸರ ಸ್ನೇಹಿತರೊಡನೆ ಸಂಪರ್ಕ ಹೊಂದಿರುವುದು ಸಮಾಜದಲ್ಲಿ ಉತ್ತಮ ಜೀವಿಯಾಗಿ ಬಾಳಲು ಅರ್ಹನಾಗುತ್ತಾನೆ. ಆ ಮುಖಾಂರ ವ್ಯಕ್ತಿ ಉತ್ತಮ ಪದ್ಧತಿ, ನೀತಿ, ಸಂಸ್ಕೃತಿ, ಸಂಸಾರ, ನಾಗರೀಕತೆಯನ್ನು ಮೈಗೂಡಿಸಿಕೊಂಡು, ಸಮಾಜದ ಬೇರೆ–ಬೇರೆ ಕ್ಷೇತ್ರಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಕಲಿಯುತ್ತಾನೆ. ಹೀಗೆ ವ್ಯಕ್ತಿಯು ಯೋಗ್ಯರೀತಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಿಂದ ಸಮಾಜದಲ್ಲಿ ಶಿಸ್ತು ಮತ್ತು ಸುವ್ಯವಸ್ಥೆಯನ್ನು ಕಾಣಲು ಸಾಧ್ಯವಾಗುತ್ತದೆ.

**4. ಮಾನವೀಯ ಮೌಲ್ಯಗಳು:** ಜಿ.ಎಸ್.ಶಿವರುದ್ರಪ್ಪ ಅವರು ಪ್ರೀತಿ, ಕರುಣೆ, ಸ್ನೇಹ, ವಿಶ್ವಾಸ, ಸಹಬಾಳ್ವೆ, ನಂಬಿಕೆ ಇವುಗಳಲ್ಲಿ ಅಪಾರ ನಂಬಿಕೆಯನ್ನು ಹೊಂದಿದ್ದವರು. ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತುಕೊಟ್ಟವರು, ಮೌಢ್ಯತೆಯ ವಿರುದ್ಧ ಜಾಗೃತಿಯನ್ನು ಮೂಡಿಸಿದವರು ಮತ್ತು ಸಮರಸ ಜೀವನಕ್ಕೆ ಒತ್ತುಕೊಟ್ಟವರು. ಪ್ರತಿಯೊಬ್ಬರು ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಆದರ್ಶಮಯವಾದ ಜೀವನವನ್ನು ನಡೆಸಬೇಕೆಂದು ಜಿ.ಎಸ್.ಶಿವರುದ್ರಪ್ಪ ಅವರು ಹೇಳಿದ್ದಾರೆ.

ಸಾಮಾಜಿಕ ಮೌಲ್ಯಗಳು: ಸಂಘಜೀವಿಯಾದ ಮನುಷ್ಯ ಸಮಾಜದ ಒಂದು ಭಾಗವಾಗಿದ್ದಾನೆ. ಆದ್ದರಿಂದ ಸಮಕಾಲೀನ ಸಮಾಜದ ಪಿಡುಗಿಗೆ ಧಾರ್ಮಿಕ ಶಕ್ತಿಯಷ್ಟೇ ರಾಜಕೀಯ ಶಕ್ತಿಯೂ ಹೊಣೆಯಾಗಿದೆ. ಇವೆಲ್ಲವನ್ನು ಅರಿತ ಜಿ.ಎಸ್.ಶಿವರುದ್ರಪ್ಪ ಅವರು ಅವರ ಕವನ ಸಂಕಲನಗಳಲ್ಲಿ ರಾಜಕೀಯ ಶಕ್ತಿಯ ಇಂತಹ ಅತ್ಯಾಚಾರಗಳ ವಿರುದ್ಧ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ. ಹಾಗೆ ಅವರು ಸುತ್ತಮುತ್ತಲಿನ ಸಮಾಜಕ್ಕೆ ಸಕ್ರಿಯವಾಗಿ ಕವಿ ಸ್ಪಂದಿಸಿದ ರೀತಿ ಇದಾಗಿದೆ.

ಒಬ್ಬ ವ್ಯಕ್ತಿ ಸಮಾಜದಲ್ಲಿನ ಇತರರೊಡನೆ ಬೆರೆತು ಕೂಡಿ ಬಾಳುವುದರಿಂದಾಗಿ ಅವನ ಗುಣಗಳು ರೂಪುಗೊಳ್ಳುತ್ತವೆ. ನಮ್ಮ ಇಂದಿನ ಬದುಕು ಈಗ ಇರುವುದಕ್ಕಿಂತ ಇನ್ನಷ್ಟು ಸುಂದರವಾಗಿ ಸುಖಮಯವಾಗಿ ಮತ್ತು ವೈಚಾರಿಕವಾಗಿ ರೂಪುಗೊಳ್ಳಬೇಕು ಎನ್ನುವುದು ಕವಿ–ಕಲೆಗಾರ–ವಿಜ್ಞಾನಿ ಮತ್ತು ನಿಜವಾದ ಜೀವನ ಪ್ರೀತಿಯುಳ್ಳ ಎಲ್ಲ ಪ್ರಜ್ಞಾವಂತರ ತುಡಿತವಾಗಿದೆ. ಆದರೆ ನಮ್ಮ ಸಮಕಾಲೀನ ವಾಸ್ತವ ಇದಕ್ಕೆ ವ್ಯತಿರಿಕ್ತವಾಗಿ, ಅತ್ಯಂತ ಕುರೂಪವೂ, ಅವೈಚಾರಿಕವೂ ಆದ ರೀತಿಯಲ್ಲಿ ಬದುಕು ರೂಪುಗೊಳ್ಳುತ್ತಿದೆಯಲ್ಲ ಎನ್ನುವುದೇ ಆತಂಕಕ್ಕೆ ಕಾರಣವಾಗಿದೆ. ಹಾಗಾಗಿ ನಾವೀಗ ಒಂದು ಅವೈಚಾರಿಕ ಪರಿಸ್ಥಿತಿಯ ನಡುವೆ ಬದುಕುತ್ತಿದ್ದೇವೆ. ದಿನವೂ ಪ್ರಪಂಚದಾದ್ಯಂತ ಸಂಭವಿಸುತ್ತಿರುವ ವಿದ್ಯಮಾನಗಳನ್ನು ವಿವಿಧ ವಿವಿಧ ಮಾಧ್ಯಮಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗಿರುವ ಈ ನಾವು ಏಕಕಾಲಕ್ಕೆ ವೈಯಕ್ತಿಕವೂ ಹಾಗೂ ಸಾರ್ವತ್ರಿಕವೂ ಆದ ಸಮಸ್ಯೆಗಳನ್ನೂ ಎದುರಿಸುತ್ತಿದ್ದೇವೆ. ಅನಕ್ಷರತೆ, ದಾರಿದ್ರ್ಯ, ಮೂಢನಂಬಿಕೆಗಳು, ಪರಿಸರ ಮಾಲಿನ್ಯ, ಧಾರ್ಮಿಕ ಮೂಲಭೂತವಾದಿಗಳಿಂದ ಸಹಬಾಳ್ವೆಗೆ

ಒದಗುತ್ತಿರುವ ಅಪಾಯಗಳು, ಮೇಲುವರ್ಗದವರಿಂದ ಕೆಳವರ್ಗದವರ ಮೇಲೆ ನಡೆಯುತ್ತಿರುವ ಆಕ್ರಮಣಗಳು, ಶೋಷಿತರ ಮತ್ತು ಮಹಿಳೆಯ ಮೇಲೆ ಆಗುತ್ತಿರುವ ದೌರ್ಜನ್ಯ ಸಾರ್ವತ್ರಿಕವಾದ, ಭ್ರಷ್ಟಾಚಾರ, ಬುದ್ಧಿವಂತರೆನಿಸಿಕೊಂಡ ವರ್ಗದವರ ಅಪ್ರಾಮಾಣಿಕತೆ, ಮುಗ್ಧತೆ ಹಾಗೂ ಸಾಚಾತನಗಳನ್ನು ಅಪಮೌಲ್ಯೀಕರಣಕ್ಕೆ ಒಳಪಡಿಸಿ ವಿಜೃಂಭಿಸುವ ಪಿತೂರಿಗಳ, ನಮ್ಮದಲ್ಲದ ಭಾಷೆಯ ಶಿಕ್ಷಣ ಮಾಧ್ಯಮದ ಭದ್ರತೆ ಕೋಟೆಗಳನ್ನು ನಿರ್ಮಿಸುತ್ತ, ಈ ದೇಶದ ಈ ಮಣ್ಣಿನಲ್ಲಿ ನಮ್ಮ ಮಕ್ಕಳು ಬೇರೂರಿ ಬೆಳೆಯುವಂತೆ ನೋಡಿಕೊಳ್ಳುತ್ತಿರುವ ನಮ್ಮ ಶೈಕ್ಷಣಿಕ ನೀತಿಗಳು ಮತ್ತು ಇಡೀ ಶಿಕ್ಷಣವನ್ನು ಒಂದು ಸಮರ್ಥವಾದ ವ್ಯಾಪಾರೋಧ್ಯಮವಾಗಿ ಪರಿವರ್ತಿಸುತ್ತ ತಮ್ಮ ಬೊಕ್ಕಸವನ್ನು ಭರ್ತಿ ಮಾಡಿಕೊಳ್ಳುವ ಗುತ್ತಿಗೆದಾರರು, ನಮ್ಮ ರಾಷ್ಟ್ರೀಯ ದೈನಂದಿನ ನೆಮ್ಮದಿಯನ್ನು ಛಿದ್ರಗೊಳಿಸುತ್ತಿರುವ ಭಯೋತ್ಪಾದಕರ ಪಿಡುಗುಗಳು, ವಿಘಟನೆಗೊಂಡ ಹಾಗೂ ವಿಘಟನೆಯ ಆತಂಕದಲ್ಲಿರುವ ಜಗತ್ತಿನ ಅನೇಕ ದೇಶಗಳನ್ನು ತನ್ನ ಅಂಕೆ ಹಾಗೂ ಪ್ರಭಾವದೊಳಗೆ ಇರಿಸಿಕೊಳ್ಳಬೇಕೆಂದು ಆಶಿಸುವ ಬಂಡವಾಳಶಾಹಿ ಪ್ರಭುತ್ವಗಳ ಒಳಸಂಚುಗಳು ಇತ್ಯಾದಿ ಅನೇಕಾನೇಕ ಸಂಗತಿಗಳು ನಮ್ಮ ಸಮಕಾಲೀನ ಬದುಕನ್ನು ಅಸ್ವಸ್ಥಗೊಳಿಸುತ್ತವೆ.

ಒಬ್ಬ ವ್ಯಕ್ತಿ ಸಮಾಜದಲ್ಲಿನ ಇತರರೊಡನೆ ಬೆರೆತು ಕೂಡಿ ಬಾಳುವುದರಿಂದಾಗಿ ಅವನ ಗುಣಗಳು ರೂಪುಗೊಳ್ಳುತ್ತವೆ. ವ್ಯಕ್ತಿಯ ಕುಟುಂಬ ತನ್ನ ಸುತ್ತಮುತ್ತಲಿನ ಪರಿಸರ ಸ್ನೇಹಿತರೊಡನೆ ಸಂಪರ್ಕ ಹೊಂದಿರುವುದು ಸಮಾಜದಲ್ಲಿ ಉತ್ತಮ ಪದ್ಧತಿ, ನೀತಿ, ಸಂಸ್ಕಾರ ನಾಗರೀಕತೆಯನ್ನು ಮೈಗೂಡಿಸಿಕೊಂಡು, ಸಮಾಜದ ಬೇರೆ ಬೇರೆ ಕ್ಷೇತ್ರಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಕಲಿಯುತ್ತಾನೆ. ಹೀಗೆ ವ್ಯಕ್ತಿಯು ಯೋಗ್ಯರೀತಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಿಂದ ಸಮಾಜದಲ್ಲಿ ಶಿಸ್ತು ಮತ್ತು ಸುವ್ಯವಸ್ಥೆ ಕಾಣಲು ಸಾಧ್ಯವಾಗುತ್ತದೆ. ನಮ್ಮ ಇಂದಿನ ಬದುಕು ಅನ್ನುವುದು ಕೇವಲ ನಮ್ಮ ವರ್ತಮಾನಕ್ಕೆ ಸೀಮಿತವಾದುದಲ್ಲ. ಅದರ ಹಿಂದೆ ಒಂದು ಭೂತಕಾಲವಿದೆ, ಅದಕ್ಕೊಂದು ಚರಿತ್ರೆಯಿದೆ, ಒಂದು ಪರಂಪರೆಯಿದೆ. ಅದು ನಮ್ಮ ವರ್ತಮಾನದ ಬದುಕನ್ನು ಪ್ರಭಾವಿಸುತ್ತದೆ. ಹೀಗಾಗಿ ನಮ್ಮ ಹಿಂದಿನ ಆ ಗತಕಾಲವೆನ್ನುವುದು ಜಡವೂ, ನಿಷ್ಕ್ರಿಯವೂ, ನಿರ್ಜೀವವೂ ಅದೊಂದು ವಸ್ತು ಅಲ್ಲ, ಅದೊಂದು ಜೀವಂತವಾದ ಶಕ್ತಿಸಮುಚ್ಚಯವೂ ಹೌದು. ಹಾಗೆಯೇ ನಮ್ಮ ಮುಂದೆ ಒಂದು ಭವಿಷ್ಯವಿದೆ. ಅದರ ಕನಸುಗಳು ಹಗೂ ಅಲ್ಲಿ ಪೂರ್ಣಗೊಳ್ಳಬೇಕಾದ ಆಶಯಗಳೂ ನಮ್ಮನ್ನು ಕಾಡುತ್ತವೆ. ವರ್ತಮಾನದಲ್ಲಿರುವ ನಮಗೆ ಗತಕಾಲದ ನೆನಪುಗಳು ಎಷ್ಟು ಮುಖ್ಯವೋ ಹಾಗೆಯೇ ಭವಿಷ್ಯತ್ತಿನ ಕನಸಗಳೂ ಅಷ್ಟೇ ಮುಖ್ಯ. ಕೇವಲ ಗತಕಾಲದ ನೆನಪುಗಳಿಗೆ ಜೋತು ಬೀಳುವವರು ತಮ್ಮ ವರ್ತಮಾನದಲ್ಲಿ ಸರಿಯಾಗಿ ಬದುಕಲಾರರು. ಹಾಗೆಯೇ ಮುಂದಿನ ಕನಸುಗಳನ್ನು ಅವಲಂಬಿಸುವವರೂ ತಮ್ಮ ವರ್ತಮಾನದಲ್ಲಿ ಸರಿಯಾಗಿ ಬದುಕಲಾರರು. ಆದ ಕಾರಣ ಹಿಂದು–ಮುಂದುಗಳ ನಡುವೆ

ಬಿಂದುವಾದ ವರ್ತಮಾನದಲ್ಲಿ ಬದುಕುವ ನಾವು ಈ ಎರಡೂ ದಿಕ್ಕುಗಳಿಗೂ ತೋರುವ ಪ್ರತಿಕ್ರಿಯೆಗಳೇನು ಅನ್ನುವುದು ಬಹುಮುಖ್ಯವಾದ ಸಂಗತಿಯಾಗಿದೆ.

ಪ್ರಾಚೀನವಾದುದೆಲ್ಲವೂ ಪವಿತ್ರವಾದುದೆಂದು ಆರಾಧಿಸುವ ಪ್ರವೃತ್ತಿಗೆ, ಆ ಪ್ರಾಚೀನವಾದುದರಲ್ಲಿರುವ ಅವೈಚಾರಿಕವೂ, ಜೀವವಿರೋಧಿಯೂ ಆದ ಸಂಗತಿಗಳು ಗೋಚರಿಸುವುದಿಲ್ಲ. ಹಾಗೆಯೇ ಆ ಪ್ರಾಚೀನವಾದುದರಲ್ಲಿರುವ ಮೌಲಿಕವಾದ ಅಂಶಗಳು ನಮ್ಮ ವರ್ತಮಾನದ ಬದುಕಿನಲ್ಲಿ ಎಷ್ಟರಮಟ್ಟಿಗೆ ಇಳಿದು ಬಂದಿವೆ ಅಥವಾ ಬಂದಿಲ್ಲ ಎಂಬ ವಿಷಯವೂ ನಮಗೆ ಕಾಣಿಸುವುದಿಲ್ಲ. ಅದರ ಬದಲಾಗಿ ನಮ್ಮಲ್ಲಿ ವೇದಗಳಿವೆ, ಉಪನಿಷತ್ತುಗಳಿವೆ, ದರ್ಶನಗಳಿವೆ, ಸಂತರು, ಸಿದ್ಧರು, ಅವತಾರ ಪುರುಷರು ಇದ್ದಾರೆ ಎಂದು ಇವುಗಳ ಕಡೆಗೆ ಬೆರಳು ತೋರಿಸುತ್ತಾ ಅದನ್ನೇ ಹಾಡಿ ಹೊಗಳುತ್ತಾ ಗತವೈಭವಗಳಲ್ಲಿ ಬದುಕುವ ಪ್ರವೃತ್ತಿಯೊಂದು ಪ್ರಬಲವಾಗಿದೆ. ನಮ್ಮ ಹಿಂದೆ ಇಂತಹ ಉದಾತ್ತವೂ ಹಾಗೂ ಉಜ್ವಲವೂ ಆದ ಪರಂಪರೆಯಿದೆ. ಆದರೆ ಅಷ್ಟಿದ್ದೂ ಯಾಕೆ ನಮ್ಮ ವರ್ತಮಾನದ ಬದುಕು, ಆ ಉದಾತ್ತ ತತ್ತ್ವಗಳಿಗೂ ತನಗೂ ಏನೇನೂ ಸಂಬಂಧವಿಲ್ಲವೆನ್ನುವಂತೆ ರೂಪುಗೊಂಡಿದೆ? ಎಂಬ ಪ್ರಶ್ನೆಗೆ ಉತ್ತರ ಕೊಡಬಲ್ಲವರು ಯಾರು? ಮುಖ್ಯವಾದ ಮಾತೆಂದರೆ ಆ ಗತ ಪರಂಪರೆಯನ್ನು ನಮ್ಮ ವಿವೇಚನೆಗೆ ಒಳಪಡಿಸುತ್ತಾ, ನಮಗೆ ಪ್ರಸ್ತುತವಾದುದನ್ನು ಉಪಯೋಗಿಸಿಕೊಳ್ಳುವ ವಿವೇಕವೇ ನಮ್ಮಲ್ಲಿ ಇಲ್ಲವೆಂದು ತೋರುತ್ತದೆ. ಅದರ ಬದಲು ಹಿಂದಿನದನ್ನು ಕೇವಲ ಆರಾಧಿಸುವುದರ ಮೂಲಕ, ನಮಗೂ ಅದಕ್ಕೂ ಇರುವ ಅಂತರವನ್ನು ಕಾಯ್ದುಕೊಳ್ಳುವ 'ಜಾಣತನ'ವೋ ಅಥವಾ ಇದರ ಮೂಲಕ ಬರಬಹುದಾದ ಪ್ರತಿಷ್ಠೆಯನ್ನು ಪ್ರದರ್ಶಿಸುವ ಚಾಪಲ್ಯವೋ ಪ್ರಧಾನವಾಗಿರುವಂತೆ ತೋರುತ್ತದೆ. ಸಾರಾಂಶವೇನೆಂದರೆ ವೈಚಾರಿಕತೆಗಿಂತ ಕುರುಡು ನಂಬಿಕೆಗಳೇ ನಮ್ಮ ಬದುಕನ್ನು ನಿಯಂತ್ರಿಸುತ್ತವೆ.

ಕವಿಯ ಕೃತಿಯಲ್ಲಿ ಸಮಾಜವು ಮುಖ್ಯವಾಗಿ ಎರಡು ಬಗೆಗಳಲ್ಲಿ ಗೋಚರವಾಗುತ್ತದೆ. ಒಂದು ಸಮಾಜದ ಚಿತ್ರಣ ಅದು ಹೆಚ್ಚು–ಕಡಿಮೆ ಇರುವಂತೆಯೇ ಇರಬಹುದು. ಎರಡು ಕೂಡ ಅದಕ್ಕಿಂತ ಮುಖ್ಯವಾಗಿ ಸಮಾಜವನ್ನು ಸೂಕ್ಷ್ಮವಾಗಿ ಅನುಭವಿಸಿದ ಕವಿ ಅದರ ಆದರ್ಶ ಆಕಾಂಕ್ಷೆಗಳಿಗೆ ಮುಖವಾಣಿಯಾಗಿರಬಹುದು. ಕಾರಣ ಕವಿ ಸಮಾಜದ ಸಮಸ್ಯೆ ತುಡಿತಗಳಿಗೆ ಸ್ಪಂದಿಸಿರುತ್ತಾನೆ. ಕನ್ನಡ ನಾಡಿನ ಹೆಸರಾಂತ ಸಾಹಿತ್ಯ ಸಾಧಕರಾದ ಜಿ.ಎಸ್.ಶಿವರುದ್ರಪ್ಪ ಅವರು ತಮ್ಮ ಸಾಹಿತ್ಯಿಕ ಜೀವನದಲ್ಲಿ ಹೇಗಿದ್ದರೂ ಹಾಗೆಯೇ ನಾಡಿನ ಸಾಂಸ್ಕೃತಿಕ ಜೀವನದಲ್ಲಿಯೂ ಹೆಸರಾದವರು. ಇವರು ತಮ್ಮ ಸೃಜನಶೀಲ ವ್ಯಕ್ತಿತ್ವದ ಮೂಲಕ ತಮ್ಮ ವ್ಯಕ್ತಿತ್ವಕ್ಕೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಘನತೆ ಮತ್ತು ಗೌರವವನ್ನು ದೊರಕಿಸಿಕೊಂಡಿದ್ದಾರೆ. ಜಿ.ಎಸ್.ಶಿವರುದ್ರಪ್ಪ ಅವರು ನಮ್ಮ ನಾಡು ಕಂಡ ಅಪರೂಪದ ವ್ಯಕ್ತಿತ್ವ. ಹಾಗಾಗಿಯೇ ಜಿ.ಎಸ್.ಶಿವರುದ್ರಪ್ಪ ಅವರ ಬರವಣಿಗೆಯಷ್ಟೇ ಅವರು ಬದುಕು ಕೂಡ ಮುಖ್ಯ. "ಒಂದು ರೀತಿಯಲ್ಲಿ ಹೇಳುವುದಾದರೆ ನಾಡಿನ ಒಟ್ಟಾರೆ ಸಾಮಾಜಿಕ–ಸಾಂಸ್ಕೃತಿಕ ಬಾಳುವೆಯಲ್ಲಿ ಶಿವರುದ್ರಪ್ಪನವರ

ಬದುಕು ಸಮ್ಮಿಳಿತವಾಗಿ ಹೋಗಿದೆ. ನಾಡಿನ ಸಾಮಾಜಿಕ ಬದುಕಿನ ಸಂದಿಗ್ಧ ಕ್ಷಣಗಳಲ್ಲಿ ಉದ್ದಕ್ಕೂ ಅವರು ತೋರುತ್ತಾ ಬಂದಿರುವ ಕ್ರಿಯಾಶೀಲ ಸ್ಪಂದನ ಮುಖ್ಯ. ಐತಿಹಾಸಿಕ ಸಂದರ್ಭಗಳ್ಲಲಿ ಅವರು ತೆಗೆದುಕೊಳ್ಳುತ್ತಾ ಬಂದಿರುವ ನಿರ್ಣಾಯಕವೆನ್ನಬಹುದಾದ ಸಮಷ್ಟಿಪರವಾದ ನಿಲುವುಗಳಿಂದ ಜಿ.ಎಸ್.ಶಿವರುದ್ರಪ್ಪ ನಾಡಿನ ಸಾಂಸ್ಕೃತಿಕ ಸಾಮಾಜಿಕ ಬದುಕಿನ ದಾರ್ಶಕ ಪ್ರಜ್ಞೆಯಾಗಿ ಪರಿಣಮಿಸಿದ್ದಾರೆ.

ಜಿ.ಎಸ್.ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಸಮಾಜದ ವೈವಿಧ್ಯಮಯವಾದ ಸಮೃದ್ಧವಾದ ಚಿತ್ರಣವಿದೆ. ಸಮಾಜವನ್ನು ಇಡಿಯಾಗಿ ನೋಡುವ ಮತ್ತು ಬಿಡಿಯಾಗಿ ನೋಡುವ ಎರಡು ರೀತಿಯ ದೃಷ್ಟಿಗಳು ಅವರ ಕವಿತೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಅವರ ಕೆಲವು ಕವನಗಳಲ್ಲಿ ಸಮಾಜವನ್ನು ಕುರಿತು ವ್ಯಂಗ್ಯ ದೃಷ್ಟಿಯೇ ಪ್ರಧಾನವಾಯಿತೇನೋ ಎನಿಸಿದರೂ ಅವು ವ್ಯಂಗ್ಯದ ಆವರಣದಲ್ಲೇ ನಿಲ್ಲುವುದಿಲ್ಲ. ಸಮಾಜದ ವಾಸ್ತವ ಚಿತ್ರಣವನ್ನು ಮತ್ತು ಅನುಭವಗಳನ್ನು ಕೊಡುವ ಕಲಾತ್ಮಕ ದಾಖಲೆಗಳಾಗಿಯೂ ಗಮನ ಸೆಳೆಯುತ್ತವೆ. ಅವರ ಕಾವ್ಯ ಸಮಕಾಲೀನ ಸಮಾಜದ ತುಡಿತ, ಗೊಂದಲ, ಸಂಕೀರ್ಣತೆಗಳನ್ನು, ಅವುಗಳ ಸೂಕ್ಷ್ಮತೆಯನ್ನು ಸರಳಗೊಳಿಸದೆ ಅಭಿವ್ಯಕ್ತಿಗೆ ಒಳಪಡಿಸಿರುವುದೇ ಹೆಚ್ಚು. ಅವರ ಆ ಆಶಯದ ಹಿಂದೆ ಮನುಷ್ಯ ಜಗತ್ತಿನಲ್ಲಿನ ಆತಂಕಗಳು ಸಡಿಲಗೊಂಡು ಉತ್ತಮ ಸಮಾಜ ನಿರ್ಮಾಣವಾಗಬೇಕೆಂಬ ನಿರೀಕ್ಷೆಯಿದೆ.

ಆಧುನೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ಸಂದರ್ಭದಲ್ಲಿ ಅಧಿಕಾರಶಾಹಿ, ಆಡಳಿತ ವ್ಯವಸ್ಥೆ, ರಾಷ್ಟ್ರ–ರಾಷ್ಟ್ರಗಳ, ವ್ಯಕ್ತಿ–ವ್ಯಕ್ತಿಗಳ ವಿವಿಧ ಸಮುದಾಯಗಳ ಜಾತಿ ಮತ್ತು ಧರ್ಮಗಳ ನಡುವೆ ಗಟ್ಟಿಯಾದ ಬೇರುಗಳಾಗಿ ನೆಲೆಯೂರಿವೆ. ಇಂತಹ ಅಸಮಾನತೆಗಳನ್ನು ಕಡಿದು ಸಮುದಾಯ ಕೇಂದ್ರಿತ ಉತ್ಕರ್ಷಕ್ಕೆ ತಾತ್ತ್ವಿಕ ಆಶಾಭಾವನೆ ಕವಿಯದು. ಈ ಜಾತಿ ಮತಧರ್ಮಗಳು ಮಾನಸಿಕ ತಳಮಳಗಳಾಗಿ ಧರ್ಮ ಸಮನ್ವಯತೆ ಸಾಧಿಸಿಕೊಳ್ಳಲಾರದಂತಹ ಪರಿಸ್ಥಿತಿ ಇಂದಿನ ಸಮಾಜದಲ್ಲಿದೆ. ಧರ್ಮ ಇಂದು ಒಂದು ಜಾತೀಯತೆಯ ಕೋಮುವಾದವನ್ನು ಹುಟ್ಟುಹಾಕಿದೆ. ಧರ್ಮ ಪ್ರೇರಿತವಾದ ರಾಜಕೀಯ ಇಚ್ಛಾಶಕ್ತಿಗಳು, ಕೋಮುಗಲಭೆಗಳನ್ನು ಅಸ್ತ್ರಗಳನ್ನಾಗಿ ಪ್ರಯೋಗಿಸಿಕೊಳ್ಳುತ್ತವೆ. ಇದು ಆರೋಗ್ಯಕರ ಸಮಾಜದ ಲಕ್ಷಣವನ್ನು, ಮೌಲ್ಯವನ್ನು ಕದಡುತ್ತಿರುವ ಬಹಳ ಘೋರವಾದ ಕೃತ್ಯ ಸಂಬಂಧಗಳು ಜಾತಿ ಸಂಕೋಲೆಗಳ ನಡುವೆ ನೇತು ಬಿದ್ದಿವೆ.

ಮಾನವೀಯತೆ ಮನುಷ್ಯತ್ವಗಳು ಮಾರುಕಟ್ಟೆಯ ಸರಕಾಗಿವೆ. ಕೌಟುಂಬಿಕತೆ ಛಿದ್ರಗೊಳ್ಳುತ್ತಿದೆ. ಯಂತ್ರ ನಾಗರೀಕತೆ ಸಮಾಜವನ್ನು ಗುಲಾಮನನ್ನಾಗಿಸಿಕೊಂಡಿದೆ. ಇಂತಹ ವಾತಾವರಣದಲ್ಲಿ ಸಮಂಜಸವಾದ ಸಮಾಜದ ಪ್ರೀತಿಯ ಹಣತೆಯ ಮಾನವೀಯತೆಯ ಬೆಳಕಿನ ಕೋಟಾ ಕೇಳಿಸುತ್ತಿಲ್ಲ. ಒಂದು ಕಡೆ ಯಂತ್ರ ನಾಗರೀಕತೆ ಮತ್ತೊಂದು ಕಡೆ ಜಾತಿ ಮತ ಪಂಥ ನಾಗರೀಕತೆ ಇವುಗಳು ಮನುಷ್ಯನ ಮತ್ತು ಪ್ರಕೃತಿಯ ಜೀವನ ಸೆಲೆಯನ್ನು ಹಿಂಡುತ್ತಿವೆ. ಇದರಿಂದ ಮಾನವ ಸಮಾಜವನ್ನು

ಬಿಡುಗಡೆಗೊಳಿಸುವ ಜರೂರು ಕಾರ್ಯ ನಮ್ಮಗಳ ನಡುವಿನ ಮುಖ್ಯ ಬದಲಾವಣೆಗಳಲ್ಲಿ ಒಂದು. ಇವುಗಳಿಗೆಲ್ಲ ಈ ಮಮತೆಯ ಮಿಡಿತದ ಬರವಣಿಗೆಯ ಮೂಲಕ ಸಮಾಜದ ಎದುರು ಪ್ರವಹಿಸಿಕೊಂಡವರು, ಉತ್ತರ ಕೊಟ್ಟವರು ನಾಡಿನ ಜನಪ್ರೀತಿಯ ಕವಿ ಜಿ.ಎಸ್.ಶಿವರುದ್ರಪ್ಪನವರು.

ಮನಸ್ಸು ಶೂನ್ಯವಾಗಿದೆ ರಮುಹೀನವಾಗಿದೆ
ಶ್ರವಣ ಸುಧಾಗೀತೆಯಂತೆ
ಮಂದಾನಿಲ ನಲಿವರೂ
ಮನಸ್ಸು ಶೂನ್ಯವಾಗಿದೆ (ಮನಸ್ಸು ಶೂನ್ಯವಾಗಿದೆ)

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ, ಯಂತ್ರ–ಯಂತ್ರಗಳ ಆವಿಷ್ಕಾರದಿಂದ, ವೈಜ್ಞಾನಿಕ ಕ್ರಾಂತಿಯಿಂದ ಮನುಷ್ಯ ತನ್ನ ನೆಮ್ಮದಿಯನ್ನು ಹಾಳುಮಾಡಿಕೊಂಡು ಮನಸ್ಸು ಶೂನ್ಯವಾಗಿ ಸತ್ವಹೀನವಾಗಿ ಬದುಕುತ್ತಿದ್ದಾನೆ. ಯಾವಾಗ ಕೌಟುಂಬಿಕ ವ್ಯವಸ್ಥೆಯ ಮೇಲೆ ಆರ್ಥಿಕತೆಯ ಪ್ರಭಾವ ಬೀರಿತೋ ಆ ವೇಳೆಯಿಂದ ಮಾನವೀಯ ಮೌಲ್ಯ ಮತ್ತು ಸಂಬಂಧಗಳಿಲ್ಲದೆ ಮನುಷ್ಯ ಸಂಕುಚಿತವಾಗಿ ಶೂನ್ಯವಾಗಿದ್ದಾನೆ.

'ಆಟ' ಎಂಬ ಕವನದಲ್ಲಿ ಮಾನವೀಯ ಮೌಲ್ಯಗಳು ಇಂದು ನಶಿಸಿ ಹೋಗುತ್ತಿವೆ. ಈ ಸಂದರ್ಭದಲ್ಲಿ ನಂಬಿಕೆ, ವಿಶ್ವಾಸ ಇನ್ನೂ ಮುಂತಾದವುಗಳ ಒಲವಿನ ಪ್ರೀತಿಯಿಲ್ಲದೆ ಸೊರಗಿವೆ. ನೀರಿನಲ್ಲಿ ಮುಳುಗಿದವನನ್ನು ನೋಡಿ ಅವನನ್ನು ದಡಕ್ಕೆ ಎತ್ತುವ ಬದಲಾಗಿ ನೋಡಿ ನಗುತ್ತಿದ್ದಾರೆ. ಇಂತಹ ಅನೇಕ ದುರ್ನಡತೆಗಳು ಇಂದು ಸಮಾಜವನ್ನು ಆವರಿಸಿವೆ. ಆದರೂ ಅದು ಅಂತಿಮವೇನಲ್ಲ. ತಿಳಿದವನಿಗೆ ಜಗವೆಲ್ಲ ರಸದ ಊಟ, ಇದನ್ನು ತಿಳಿಯದೇ ಮನುಷ್ಯ ಮಂಕಾಗಿದ್ದಾನೆ ಮತ್ತು ಮಾನವೀಯ ಮೌಲ್ಯ, ಸಾಮಾಜಿಕ ಮೌಲ್ಯಗಳನ್ನು ಕಳೆದುಕೊಂಡಿದ್ದಾನೆ.

ಕಣ್ಣೀರ ಹನಿಯಲ್ಲಿ ಮೊಗದ ನಗೆಯನು ಕಂಡೆ
ಕಣ್ಣೀರ ಹನಿಯಲ್ಲಿ ಜಗದ ಹೃದಯವ ಕಂಡೆ
ಕಣ್ಣೀರಿನಲಿ ವಿವಿಧ ಅನುಭವದ ಸವಿಯುಂಡೆ
ಕಣ್ಣೀರಿಗೂ ಮಿಗಿಲು ತತ್ತ್ವಬೋಧಕರಿಲ್ಲ
ಮುನ್ನೀರು ಎಂಬುದೂ ಕಣ್ಣೀರೆ ಎಲ್ಲ!

'ಕಣ್ಣೀರು' ಎಂಬ ಕವನದಲ್ಲಿ ಕಣ್ಣೀರ ಕತೆಯಿಂದ ಅಥವಾ ಕಷ್ಟಗಳನ್ನು ಅನುಭವಿಸುವುದರಿಂದ ಜಗತ್ತಿನ ಹೃದಯವಂತಿಕೆ ಕಂಡೆ, ವಿವಿಧ ಅನುಭವಗಳನ್ನು ಕಂಡೆ ಎನ್ನುತ್ತಾರೆ. ಈ ಕವನವು ಇಲ್ಲಿ ಕಣ್ಣೀರು ಎಂಬುದು ನೋವಿನ, ದುಃಖದ ಸಂಕೇತ ಮಾತ್ರವಲ್ಲ, ಕರುಣೆಯ, ಪ್ರೀತಿಯ ಸಂಕೇತವೂ ಆಗಿದೆ ಎಂಬುದು ಕವನದ ಆಶಯ ಮತ್ತು ಧೋರಣೆಯನ್ನು ಸುಸ್ಪಷ್ಟವಾಗಿ ಅನಾವರಣಗೊಳಿಸುತ್ತದೆ.

ಸುತ್ತಲು ಮೆತ್ತಿರುವ ಕತ್ತಲೆಯ ಹುತ್ತ?

ತಳಾತಳದಲ್ಲಿ ನಾನಿರುವೆ ಹಗಲು

ಇರುಳು ಕಾಯುತ್ತ, ನಿಡು ಸುಯ್ಯುತ್ತ (ವಾಲ್ಮೀಕಿ–ತೆರೆದ ದಾರಿ)

ಎನ್ನುತ ಯಾವ ಮೌಲ್ಯಗಳಿಲ್ಲದ ಸಾಮಾಜಿಕ ಪರಿಸ್ಥಿತಿಯಲ್ಲಿ ಅಂಧಕಾರ ಆವರಿಸಿರುವುದನ್ನು ಜಿ.ಎಸ್.ಎಸ್. ಅವರು ವಿವರಿಸುತ್ತಾರೆ.

ಸಾಮಾಜಿಕ ಮೌಲ್ಯಗಳು, ಮಾನವೀಯ ಮೌಲ್ಯಗಳು, ಮನೋವೈಜ್ಞಾನಿಕ ಮೌಲ್ಯಗಳು ನಶಿಸಿ ಹೋಗುತ್ತಿರುವುದನ್ನು 'ಬಾಗಿಲಲ್ಲಿ' ಎಂಬ ಕವನದ ಮೂಲಕ ಜಿ.ಎಸ್.ಎಸ್.ಅವರು ಹೇಳಿದ್ದಾರೆ. ಮನುಷ್ಯನ ಮನಸ್ಸು ಬೆಳಗಿನಿಂದ ಸಂಜೆಯವರೆಗೂ ಚಿಂತೆಯಲ್ಲಿ ಮುಳುಗಿರುವುದನ್ನು ನಿರೂಪಿಸಲಾಗಿದೆ. ಹಗಲಿರುಳು ಸಾವಿರ ಸಮಸ್ಯೆಗಳಲ್ಲಿ ಈ ಜೀವವೇ ತಳಮಳಿಸಿ 'ಸಂಶಯದ ಜೇಡ ಜಾಲದಿಮನಸು ಹುಳದಂತೆ' ನಿತ್ಯವು ತಡುಕಾಡುತ್ತಿದೆ.

ಯಾವುದೇ ಶುಭದ ಭಯವಾಣಿ ಇಂದು

ನುಡಿಯುತಿದೆ ನನ್ನ ಮನೆ ಬಾಗಿಲಲಿ ನಿಂದು!

'ತಲ್ಲಣಿ' ಸದಿರು ಕಂಡ್ಯ ತಾಳುಮನವೇ

ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ (ಬಾಗಿಲಲ್ಲಿ ಚೆಲುವು–ಒಲವು)

ಜೀವನದಲ್ಲಿ ಸಮಸ್ಯೆಗಳಿಂದ ಮನುಷ್ಯ ತಲ್ಲಣಗೊಂಡು ಅತೃಪ್ತಿ, ದಾರಿದ್ರ್ಯ, ಸಂಕಟ ಆವರಿಸಿ ಜೀವನವು ನೆಮ್ಮದಿಯಿಲ್ಲದ ಬದುಕಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳು, ಆದರ್ಶ ಮೌಲ್ಯಗಳು, ಸಾಮಾಜಿಕ ಮೌಲ್ಯಗಳು ಕಡಿಮೆಯಾಗುತ್ತಿರುವುದನ್ನು 'ನನ್ನ ಸುತ್ತ' ಎಂಬ ಕವನದಲ್ಲಿ ಜಿ.ಎಸ್.ಶಿವರುದ್ರಪ್ಪ ಅವರು ವಿವರಿಸುತ್ತಾರೆ. ಇಂತಹ ಸಾಮಾಜಿಕ ಪರಿಸ್ಥಿತಿಯಲ್ಲಿ ನಿರೂಪಕನಾದ ಕವಿ ಕೂಡ ಸಿಲುಕಿ ಪ್ರಸ್ತುತ ಕವನದ ಮೂಲಕ ಅನಾವರಣಗೊಂಡಿರುವುದನ್ನು ಕಾಣಬಹುದು.

ಸಿಕ್ಕಿಕೊಂಡಿದ್ದೇನೆ ನಾನೂ

ಕೊಳಕು ಮಂಡಲದ ನಡುವೆ

ಕೊಂಕು ನಗೆ, ನರಿಮಾತು, ಕಪಿಮುಷ್ಟಿ

ವೃಕೋದರಗಳ ಮಧ್ಯೆ (ನನ್ನ ಸುತ್ತ – ಗೋಡೆ)

ಇಂದು ನಾವು ಕೌಟುಂಬಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಬರೀ ಮೋಸ, ವಂಚನೆಗಳ ಮಧ್ಯ ನರಳುತ್ತಿದ್ದೇವೆ. ಈ ಸಮಾಜದಿಂದ ಹೊರಬಂದರೆ ಸಾಕು ಎಂದು ಕವಿ ಆಶಿಸುತ್ತಾರೆ. ಸಮಾಜದಲ್ಲಿರುವ ಜನರ ಮನಸ್ಥಿತಿಯನ್ನು ತಮ್ಮ ಕವನದಲ್ಲಿ ಹೀಗೆ ಚಿತ್ರಿಸಿದ್ದಾರೆ.

ಮೊದಮೊದಲು ನಯವಾದ ಜೇಡನಜಾಲ

ಆನಂತರ ರಾಶಿಮಯ ನೂಲನ ಕುಣಿಕೆ

ಬರುಬರುತ್ತಾ ಬೆಸ್ತಬಲೆ ಗಾಳ ಬೀಸುವ ಗಿತ್ತು

ನನ್ನ ಸುತ್ತೂ – (ನನ್ನ ಸುತ್ತ – ಗೋಡೆ)

ಆದ್ದರಿಂದ ಈ ಸಮಾಜದಲ್ಲಿ ಬದುಕುವ ಉಪಾಯದ ಮಾರ್ಗಗಳನ್ನು ಕಂಡುಕೊಳ್ಳಬೇಕು. ಕಷ್ಟಕಾಲದಲ್ಲಿ ಒಬ್ಬಂಟಿಯಾಗಿ ಹಿಂಸೆ, ಅಪಮಾನ ಮುಂತಾದವುಗಳನ್ನು ಎದುರಿಸಬೇಕಾಗುತ್ತದೆಂದು ಮತ್ತು ಸಮಾಜದಲ್ಲಿ ಮೋಸ, ವಂಚನೆ, ಅನ್ಯಾಯ, ಅಕ್ರಮ ಮುಂತಾದವುಗಳನ್ನು ಎದುರಿಸುತ್ತಾ ಬಾಳಿ ಬದುಕಬೇಕು ಎಂದು ಹೇಳುತ್ತಾರೆ. ಸಮಾಜದಲ್ಲಿನ ತೊಡಕುಗಳನ್ನು ಹೋಗಲಾಡಿಸಲು ಜಿ.ಎಸ್.ಶಿವರುದ್ರಪ್ಪ ಅವರು 'ಸದಾಸಿದ್ಧ' ಎಂಬ ಕವನದಲ್ಲಿ ನಿರೂಪಕನ ಪಾತ್ರದ ಮೂಲಕ ಹೇಳಲು ಹೊರಟಿದ್ದಾರೆ.

ಹುಚ್ಮಂಡೆಯ ಮದುವೆಯಲ್ಲಿ ಉಂಡವ, ಜಾಣರೊಂದಿಗೆ

ಇವನು ಕೂಡ ಉಣಿಲಿಲ್ಲ

ಬೆರಳು ಸಿಕ್ಕರಷ್ಟೆ ಸಾಕು ಹಸ್ತವನ್ನು ನುಂಗಿಬಿಡುವ

ಕಲೆಯನಿವನು ಕಲಿಯಲಿಲ್ಲ (ಸದಾಸಿದ್ದ – ತೆರೆದ ದಾರಿ)

ಸಮಾಜದ ಪರಿಸ್ಥಿತಿಗೂ ಹೊಂದಿಕೊಳ್ಳಲು ಆಗದೆ, ದೂರೀಕರಿಸಲೂ ಆಗದೆ, ಬೆಳ್ಳಗಿರುವುದೆಲ್ಲ ಹಾಲೆಂದು ಕುಡಿಯುವ, ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವ, ಸದಾ ಬಳ್ಳಿಯ ಸ್ವಭಾವದ ಇವನ ಹೆಸರು ಸದಾಸಿದ್ಧ ಎಂದು ಕವಿ ಹೇಳುತ್ತಾರೆ. ಕವನದಲ್ಲಿ ಬಳಕೆಯಾಗಿರುವ ದೇಸಿ ಗಾದೆ ಮಾತುಗಳಾದ ಹುಚ್ಮುಂಡೆ, ಅಪ್ರಬುದ್ಧ, ಬೆಪ್ಪು ತಕ್ಕಡಿ, ಗಾಂಪ ಎಂಬ ಈ ಶಬ್ದಗಳ ದೇಸಿಯ ಸೊಗಡಿನ ಮೂಲಕ ಕ್ರಾಂತಿ ಮಾಡುವುದು ಕವಿ ಜಿ.ಎಸ್.ಶಿವರುದ್ರಪ್ಪ ಅವರ ಆಶಯವಾಗಿದೆ. ಸಮಾಜದಲ್ಲಿ ವ್ಯಕ್ತಿ ಸಹಜವಾದ ಬಯಕೆಗಳು ಕೆಲವು ವೇಳೆ ಪ್ರಕಟಗೊಳ್ಳಬಹುದು, ಪ್ರಕಟಗೊಳ್ಳದಿರಬಹುದು. ಕೆಲವು ಬಯಕೆಗಳು ಇಲ್ಲದೆ ಇದ್ದರೂ ಇದ್ದಕ್ಕಿದ್ದ ಹಾಗೆ ಬಂದು ಎದೆಗೂಡಿನ ಅಂತರಾಳದಲ್ಲಿ ಸೇರಬಹುದು.

ಹೀಗೆ ಮನಸ್ಸನ್ನು ತುಂಬಿದ ಬಯಕೆಗಳು ಮನುಷ್ಯನಿಗೆ ಸಹಜವಾದವುಗಳು. ಇವುಗಳು ಇದ್ದಕ್ಕಿದ್ದಂತೆ ಬಂದು ನೋವನ್ನು ತರಬಹುದು, ಉಲ್ಲಾಸವನ್ನು ತರಬಹುದು, ಇದ್ದಕ್ಕಿದ್ದಂತೆ ಮಾಯವಾಗಬಹುದು. ಒಟ್ಟಾರೆಯಾಗಿ ಬಯಕೆಗಳು ಮನುಷ್ಯ ಸಹಜವಾದವುಗಳು ಎಂದು ಕವಿ ತನ್ನ ಈ ಕವನದ ಮೂಲಕ ಗ್ರಹಿಸಿದ್ದಾರೆ.

ಸಾಮಾಜಿಕ ಪರಿಸರದಲ್ಲಿ ಮನುಷ್ಯ ಸಮಾಜದ ಮೂಢನಂಬಿಕೆ, ಕಂದಾಚಾರ, ಸಮಾಜದಲ್ಲಿ ನಡೆಯುವ ಘಟನೆಗಳು ಕವಿಯಾದವನ ಮೇಲೆ ಪ್ರಭಾವ ಬೀರುತ್ತದೆ. ಈ ಸಂಪ್ರದಾಯಗಳು ಕೆಲವೊಮ್ಮೆ

ಮೂಢ ನಂಬಿಕೆಗಳಾಗಬಹುದು. ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿ ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುವ ಸಾಧ್ಯತೆಯನ್ನು ಸಮಾಜದಲ್ಲಿ ನಾವು ಇವತ್ತು ನೋಡಬಹುದು.

'ಕಾರಣಿಕ' ಎಂಬ ಕವನದಲ್ಲಿ 'ಮನೆಯ ಮೂಲೆಯೊಳಿಲ್ಲ ಲೊಚಗುಡುತಲಿವೆ ಹಲ್ಲಿ' ಎಂದು ಆರಂಭವಾಗುವ ಕವನ ಮುಂದೆ 'ಪರೆಪರೆಯ ಜೇಡಬಲೆ ಜೋತಿರುವುದಿಲ್ಲ!' ಎಂದು ತಿಳಿಸುವುದರ ಮೂಲಕ ವಸ್ತುಸ್ಥಿತಿಯನ್ನು ಹೀಗೆ ತೆರೆದಿಡುತ್ತದೆ.

ಮನೆಯ ತುಂಬಾ ಧೂಳು,
ಬೇಸರದ ಬೂದಿ
ಗೆದ್ದಲೋ ಗೆದ್ದಲೂ,
ಕಾಲಿಡಲು ಎಲ್ಲೆಲ್ಲು
ಇಲ್ಲವೋ ಹಾದಿ!
ಯಾವ ಚಣವೋ ಏನೋ
ವಿಲಯವೈತರಬಹುದು,
ಕಡೆತನಕ ಈ ಮನೆಗೆ
ಇಂಥ ಪಾಡೆ? (ಕಾರಣಿಕ – ಚೆಲುವು–ಒಲವು)

ಒಂದು ಸಾಮಾನ್ಯ ಮನೆಯ ಚಿತ್ರಣವನ್ನು ಮತ್ತು ಸಾಮಾಜಿಕ ಮೌಲ್ಯಗಳು ನಶಿಸಿ ಹೋಗುತ್ತಿರುವುದನ್ನು ಮೂಢನಂಬಿಕೆ, ಕಂದಾಚಾರಗಳಿಗೆ ಸಿಕ್ಕಿ ಮಾನವನ ಜೀವಜಗತ್ತು ತೊಳಲಾಡುತ್ತಿರುವುದನ್ನು ನಾವು ಇಲ್ಲಿ ಕವಿಯ ಕವನದ ಆಶಯವಾಗಿದೆ ಎಂದು ತಿಳಿಯಬಹುದು. ಸಾಮಜಿಕ ಮೌಲ್ಯಗಳು ಅಧಃಪತನ ಹೊಂದುತ್ತಿರುವುದನ್ನು ಸರಿಪಡಿಸಲು ಒಬ್ಬ ಕಾರಣಿಕ ಪುರುಷ ಬೇಕಾಗಿರುವುದು ನಮಗೆ ಅವರ ಕರ್ಮದ ಮೂಲಕ ತಿಳಿಯುತ್ತದೆ.

ಯಾರೊ ಬಂದಂತಾಯ್ತು
ಬಾಗಿಲಲಿ!
ಕದವ ತಳ್ಳಿದರಾರೊ!
ಗಿರುಕೆಂದಿತು
ಯಾವ ಬೆಳಕೋ ಏನೋ
ಒಳಗೈದಿತು!
ಯಾವ ಸೀಮೆಯ ವೇಷ
ಯಾರು ಅವನು? (ಕಾರಣಿಕ – ದೇವಶಿಲ್ಪ)

ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಸರಿ ಮಾಡುವವರು ಯಾರು ಎನ್ನುವ ಸಂದರ್ಭದಲ್ಲಿ ಬುಡುಬುಡಿಕೆಯವನು ಬಂದು ಮನೆಯ ಹೊರಗೂ ಒಳಗೂ, ಮನಸ್ಸಿನ ಒಳಗೂ ಹೊರಗೂ ಸರಿಮಾಡುವವನು ಬಂದೇ ಬರುತ್ತಾನೆ ಎಂದು:

ಶುಭವಾಗುತ್ತೈತೆ ಶುಭವಾಗುತ್ತೈತೆ

ಶುಭವಾಗುತ್ತೈತೆ ನಿಮಗೆ,

ಎನ್ನುವನು ನಿಂತು ಹೊರಗೆ

ಜೀವ ಹಾರೈಸಿರಲು ಸುಭದ ನುಡಿಗೆ! (ಕಾರಣಿಕ – ದೇವಶಿಲ್ಪ)

ಈ ರೀತಿಯಾಗಿ ಕಾರಣಿಕ ಕವನದಲ್ಲಿ ತಿಳಿಯಬಹುದಾಗಿದೆ.

ಸಾಮಾಜಿಕ ಬದುಕು ಯಾವುದೇ ಮೌಲ್ಯಗಳಿಲ್ಲದೇ ಹೇಗೆ ಜಾರಿಹೋಗಿದೆ ಎಂಬುದನ್ನು ಒಂದು ಸುಂದರ ಹೂವಿಗೆ ಹೋಲಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ಅವಳ ಸಿರಿಮುಡಿಯಿಂದ ಕೆಳಗೆ ಉರುಳಿತು ಹೂವು ಯಾಮಿನಿಯ ಮುಡಿಯಿಂದ ನಕ್ಷತ್ರದಂತೆ (ಜಾರಿದ ಹೂವಿಗೆ – ಚೆಲುವು–ಒಲವು)

ಒಂದು ಸುಂದರ ಹೂವನ್ನು ಮುಡಿದ ಹೆಣ್ಣು ನಡೆದು ಹೋಗುತ್ತಿದ್ದ ಸಂದರ್ಭದಲ್ಲಿ ಹೂವು ಬಿದ್ದರೂ ಗಮನಿಸದೆ ಬಿಂಕದಲ್ಲಿ ಆ ಹೆಣ್ಣು ನಡೆದು ಹೋಗುತ್ತಿರುವಾಗ ಹೂವು ಯಾವ ಸ್ಥಿತಿಯಲ್ಲಿ ದಿಕ್ಕಿಲ್ಲದೆ ಬಿದ್ದಿತ್ತು ಎಂಬುದನ್ನು ಅಪ್ಸರೆಯರು ಋಷಿಮುನಿಗಳು ತಪಸ್ಸು ಭಂಗಗೊಳಿಸಿ ಮಗು ಜನಿಸಿದ ನಂತರ ಬಿಟ್ಟು ಹೋದ ಮಗುವಿನ ಸ್ಥಿತಿಯಲ್ಲಿ ಆ ಹೂವು ಕಾಣಿಸುತ್ತಿತ್ತು ಎಂದು ಹೇಳಿದ್ದಾರೆ.

ಅಪ್ಸರೆಯು ತೊರೆದೊಂದು ಮರ್ತ್ಯಾಮರ್ತ್ಯ ಶಿಶು

ವಿನ ತೆರದಿ ಹೂವಿಹುದು ದಿಕ್ಕಿಲ್ಲದೆ (ಜಾರಿದ ಹೂವಿಗೆ : ಚೆಲುವು – ಒಲವು)

ಒಂದು ಸಾಮಾನ್ಯ ಹೂವಿನ ಮೂಲಕ ಇಡೀ ಸಾಮಾಜಿಕ ಮೌಲ್ಯಗಳನ್ನು ಬದುಕನ್ನು ಚಿತ್ರಿಸಿರುವ ರೀತಿ ಜಿ.ಎಸ್.ಶಿವರುದ್ರಪ್ಪ ಅವರ ಅತ್ಯಂತ ಉತ್ಕೃಷ್ಟ ಪ್ರತಿಭೆಯನ್ನು ಬಿಂಬಿಸುತ್ತದೆ. ಸಾಮಾಜಿಕ ಮೌಲ್ಯಗಳು ನಶಿಸುತ್ತಿರುವ ಸಂದರ್ಭದಲ್ಲಿ ಹೂವಿನ ಮೂಲಕ ಉತ್ತರ ಹುಡುಕುವುದನ್ನು ನಾವಿಲ್ಲಿ ಗಂಭೀರವಾಗಿ ನೋಡಬಹುದು.

ಸಮಾಜದ ಪರಿಸ್ಥಿತಿಗಳು ಕೆಲವೊಮ್ಮೆ ಮನುಷ್ಯನನ್ನು ಸಂದಿಗ್ಧಗೊಳಿಸುತ್ತವೆ. ಅವುಗಳನ್ನು ಪ್ರತಿಭಟಿಸಲೂ ಆಗದೆ, ಒಪ್ಪಿಕೊಳ್ಳಲೂ ಆಗದೆ ಮನುಷ್ಯ ಸಂದಿಗ್ಧವಾಗಿರುವುದನ್ನು ಜಿ.ಎಸ್.ಶಿವರುದ್ರಪ್ಪ ಅವರು 'ಸಂದಿಗ್ಧ' ಎಂಬ ಕವನದ ಮೂಲಕ ಹೇಳಿರುವುದನ್ನು ಗಮನಿಸಬಹುದು.

ಕಣ್ಣೆದುರು ಕಾಣುವುದನ್ನು ಕಂಡು ಕಂಡು ಸುಮ್ಮನಿರಲಾರೆ

ಹಾಗಂತ, ಹೋರಾಟಕ್ಕೆ ಇಳಿದರೆ
ಸಮಸ್ತ ಶಸ್ತ್ರಾಸ್ತ್ರಗಳು ಬರಿದಾಗಿ
ಅಭಿಮನ್ಯುವಿನ ನೆನಪಾಗುತ್ತದೆ ಈಗ ಮಾಡುವುದೇನು
(ಸಂದಿಗ್ಧ, ಪ್ರೀತಿ ಇಲ್ಲದ ಮೇಲೆ)

ಸಾಮಾಜಿಕವಾಗಿ ಕಂಡು ಬರುವ ಸನ್ನಿವೇಶಗಳನ್ನು ಪೌರಾಣಿಕ ವಿಚಾರಗಳಿಗೆ ಹೋಲಿಸಿದರೆ ಹೇಗೆ ಅಭಿಮನ್ಯು ಅನ್ಯಾಯದ ವಿರುದ್ಧ ಪ್ರತಿಭಟಿಸಿ ಮಣ್ಣು ಪಾಲಾದನೋ ಹಾಗೆ ನಾನು ಮಣ್ಣಾಗಲೇ ಅಥವಾ ವ್ಯವಸ್ಥೆಗೆ ಹೊಂದಿಕೊಳ್ಳಲೇ ಎನ್ನುವ ಸಂದಿಗ್ಧತೆಯಲ್ಲಿ ಕವಿ ಸಿಲುಕಿರುವುದನ್ನು ನಾವಿಲ್ಲಿ ನೋಡಬಹುದು.

ಇತಿಹಾಸದುದ್ದಕ್ಕೂ ಸಾಮಾಜಿಕ ಬದುಕಿನ ಚಿತ್ರಣ ಮತ್ತು ಪ್ರತಿಯೊಬ್ಬನ ಕೊಡುಗೆಯನ್ನು ಉದಾಹರಣೆ ಸಹಿತ ವಿವರಿಸುತ್ತಾ, ಈ ಸಮಾಜಕ್ಕೆ ನನ್ ಕೊಡುಗೆ ಏನು ಎಂದು ಚಿಂತಿಸಬೇಕಾಗಿದೆ ಎಂದು ಜಿ.ಎಸ್.ಶಿವರುದ್ರಪ್ಪ ಅವರು 'ದಾರಿಯುದ್ದಕ್ಕೂ' ಎಂಬ ಕವನದಲ್ಲಿ ವಿವರಿಸಿದ್ದಾರೆ. 'ಸ್ಥಾವರಕ್ಕಳಿವುಂಟು' ಎಂಬ ಕವನವು ಪ್ರಸ್ತುತ ಸಮಾಜದ ಪರಿಸ್ಥಿತಿಯನ್ನು ನೆನಪಿಸುವ ಕವನವಾಗಿದೆ.

ಬೆಳೆಯ ಭೂಮಿಯೊಳೊಂದು ಪ್ರಳಯದ ಕಸಹುಟ್ಟಿ
ಹುಲುಸಾಗಿ ಬೆಳೆಯುವಂತಾದದ್ದು ಹೆಣಯ್ಯ
ಉಳಿವೆಯಲ್ಲಿ ಕೊನೆಗೂ ಉಳಿದದ್ದು ಏನಯ್ಯ? (ಸ್ಥಾವರಕ್ಕಳಿವುಂಟು – ವ್ಯಕ್ತ ಮಧ್ಯ)

ಪ್ರಸ್ತುತ ಸಮಾಜದಲ್ಲಿ ಜಾಗತೀಕರಣ, ಆಧುನೀಕರಣ, ಪಾಶ್ಚಾತ್ಯೀಕರಣ, ಯಾಂತ್ರೀಕರಣ ಮುಂತಾದವುಗಳಿಂದ 'ಅಸ್ವಸ್ಥ ಭಾರತ' ಎಂಬ ಕವನದಲ್ಲಿ ಭಾರತೀಯ ಸಂಸ್ಕೃತಿ ನಾಶವಾಗುತ್ತಿರುವುದನ್ನು ಕುರಿತು ವ್ಯಕ್ತಪಡಿಸಿದ್ದಾರೆ. ಆಧುನಿಕ ಎಂಬುದು ಮಾನವನ ಬದುಕಿನಲ್ಲಿ ಸಾಮಾಜಿಕ ಮೌಲ್ಯ, ಕಲೆ, ಸಾಹಿತ್ಯ, ಸಂಸ್ಕೃತಿಗಳೆಲ್ಲ ನಿರ್ಣಯವಾಗಿ ಅವುಗಳಿಗೆಲ್ಲ ಹೊಸ ಜನ್ಮ ಬಂದಿದೆ. ನಾವು ಉಸಿರಾಡುವ ಗಾಳಿ, ನೀರು ಮುಂತಾದವುಗಳೆಲ್ಲ ಕಲುಷಿತಗೊಳಿಸಿ ಬಹುರಾಷ್ಟ್ರೀಯ ಸಂಸ್ಕೃತಿ ತಮ್ಮ ಬುದ್ಧಿಯನ್ನೆಲ್ಲ ಬಲಿಕೊಟ್ಟು ರಾಷ್ಟ್ರೀಯ ನಾಯಕರೆಲ್ಲ ಕುರ್ಚಿಯಲ್ಲಿ ಕೂತು ವಿಪರೀತ ಆಸೆಯಿಂದ ಇಂದು ಅಸ್ವಸ್ಥ ಭಾರತವಾಗಿದೆ, ಸಮಾಜವಾಗಿದೆ ಎಂಬುದನ್ನು ಜಿ.ಎಸ್.ಶಿವರುದ್ರಪ್ಪ ಅವರು ಈ ಕವನದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

'ಕೆಲವು ಪ್ರಶ್ನೆಗಳು' ಎಂಬ ಕವನದಲ್ಲಿ ಸಾಮಾಜಿಕ ಮೌಲ್ಯಗಳು, ಮಾನವೀಯ ಮೌಲ್ಯಗಳು, ಮತ ಪಂಥ ಮುಂತಾದವುಗಳನ್ನು ಪ್ರಶ್ನಿಸುವುದರ ಮೂಲಕ ಮನುಷ್ಯತ್ವ, ಮಾನವೀಯತೆ ಇವುಗಳ ಹುಡುಕಾಟದಲ್ಲಿ ತೊಡಗಿರುವುದನ್ನು ನಾವು ವಿವೇಚಿಸಬಹುದು. ಈ ದೇಶದಲ್ಲಿ ಎಲ್ಲವೂ ಇದೆ, ಆದರೆ ಪ್ರೀತಿ, ವಿಶ್ವಾಸ, ಸಾಮಾಜಿಕ ಮೌಲ್ಯ, ಮಾನವೀಯ ಮೌಲ್ಯ ಇವುಗಳು ಮಾತ್ರ ಇಲ್ಲದಿರುವುದನ್ನು ಮತ್ತು

ಇವುಗಳಲ್ಲಿ ಇಲ್ಲದೆ ಇರುವ ಪ್ರೀತಿಯ ಹುಡುಕಾಟದಲ್ಲಿ ನಾವುಗಳು ತೊಡರಿರುವ ಪರಿಯನ್ನು ವಿವರಿಸಿದ್ದಾರೆ.

ನಾಳೆ ಈ ಸಸಿಗಳೆಲ್ಲ ವಟವೃಕ್ಷವಾಗಿ
ಸಾವಿರ ಜನಕ್ಕೆ ನೆರಳಾದವೆಂಬ ಮಹಾದಾಸೆ ಇರದಿದ್ದರೂ
ಒಂದೆರಡಾದರೂ 'ಬೀಜವಾಗುವಂಥ' ಹೆಣ್ಣು
ಬಿಟ್ಟಾವೆಂದು 'ನಂಬಿ ಕಾಯುತ್ತೇನೆ' – (ನನ್ನ ಹಣತೆ, ಹಣತೆ)

ಎನ್ನುವಲ್ಲಿ ಅತಿಯಾಸೆಯಿಲ್ಲದ, ಆದರೆ ವಿಶ್ವಾಸದ ನಿರೀಕ್ಷೆ ಇದೆ. ತನ್ನ ಪ್ರಾಮಾಣಿಕ ಶ್ರಮದ ಬಗ್ಗೆ ನಂಬಿಕೆ ಹಾಗೂ ನಿರಂತರ ಆಶಾಭಾವನೆಯಿದೆ. ಈ ಎಲ್ಲದರ ಹಿನ್ನೆಲೆಗಿರುವುದು ಕವಿಗೆ ಜೀವನ ಬಗೆಗಿರುವ ಕಾಳಜಿಯಾಗಿದೆ. ಹೀಗೆ ಜಿ.ಎಸ್.ಶಿವರುದ್ರಪ್ಪ ಅವರು ಸಮಕಾಲೀನ ಬದುಕಿಗೆ ಸಕ್ರಿಯವಾಗಿ ಸ್ಪಂದಿಸಿದ್ದಾರೆ. ತಮ್ಮನ್ನು ಅದರ ಜೊತೆಗೆ ಗುರುತಿಸಿಕೊಂಡು ಸಮಾಜದೊಳಗಿನ ಕುಂದುಕೊರತೆಗಳಿಗೆ ಕನ್ನಡಿಯಾಗಬೇಕಾದದ್ದು ಕಾವ್ಯದ ಕರ್ತವ್ಯ ಎಂದು ಸಾಹಿತ್ಯದ ಗುರುತ್ವವನ್ನು ಪ್ರತಿಪಾದಿಸಿದ್ದಾರೆ. ಬದುಕಿನ ಬಗೆಗೆ ಕವಿ ವ್ಯಕ್ತಪಡಿಸುವ ಪ್ರೀತಿ ಕಾಳಜಿಗಳು, ಸಾಮಾಜಿಕ ಮೌಲ್ಯಗಳು, ವೈಚಾರಿಕ ದೃಷ್ಟಿಕೋನಗಳು ಅವರನ್ನು ಒಬ್ಬ ಜನರ ಕವಿಯನ್ನಾಗಿಸುತ್ತವೆ.

ಮೇಲೆ ವಿಶ್ಲೇಷಿಸಿಕೊಂಡ ಚಿಂತನೆಗಳಿಗೆ ಪೂರಕವಾಗಿ ಜಿ.ಎಸ್.ಶಿವರುದ್ರಪ್ಪ ಅವರ ಕಾವ್ಯದಲ್ಲಿ ಪ್ರೇರಿತವಾದ ಸಾಮಾಜಿಕ ಮೌಲ್ಯಗಳ ನೆಲೆಪ್ರೇರಿತವಾದ ಸಂವೇದನೆಗಳಿವೆ. ಕೌಟುಂಬಿಕ, ಧಾರ್ಮಿಕ, ರಾಜಕೀಯ ಮತ್ತು ವೈಚಾರಿಕ ನೆಲೆಗಳಿವೆ. ಇವುಗಳನ್ನೆಲ್ಲ ಏಕಕಾಲದಲ್ಲಿ ಸಮಗ್ರವಾಗಿ ನಿಲ್ಲಿಸುವುದು ಸುಲಭವಲ್ಲ ಎಂದು ಜಿ.ಎಸ್.ಶಿವರುದ್ರಪ್ಪ ಅವರು ಸಾಮಾಜಿಕ ಮೌಲ್ಯಗಳ ಬಗ್ಗೆ ಹಲವು ರೀತಿಯಲ್ಲಿ ಅವರ ಕವಿತೆ–ಕವನಗಳ ಮೂಲಕ ತಿಳಿಸಿಕೊಟ್ಟಿದ್ದಾರೆ.

## ಪರಾಮರ್ಶನ ಗ್ರಂಥಗಳು


1. ಜಿ.ಎಸ್.ಶಿವರುದ್ರಪ್ಪ – ಸಮಗ್ರ ಗದ್ಯ ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2009
2. ಜಿ.ಎಸ್.ಶಿವರುದ್ರಪ್ಪ – ಸಮಗ್ರ ಗದ್ಯ ಸಂಪುಟ–4, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2009
3. ಜಿ.ಎಸ್.ಶಿವರುದ್ರಪ್ಪ – ಸೌಂದರ್ಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2009
4. ಜಿ.ಎಸ್.ಶಿವರುದ್ರಪ್ಪ – ಸಮಗ್ರ ಗದ್ಯ ಸಂಪುಟ–5, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 2009
5. ಜಿ.ಎಸ್.ಶಿವರುದ್ರಪ್ಪ – ಕಾವ್ಯಾರ್ಥ ಚಿಂತನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2009
6. ಜಿ.ಎಸ್.ಶಿವರುದ್ರಪ್ಪ– ಕುವೆಂಪು ಪುನರಾವಲೋಕನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2009
7. ಜಿ.ಎಸ್.ಶಿವರುದ್ರಪ್ಪ – ಕನ್ನಡ ಸಾಹಿತ್ಯ ಸಮೀಕ್ಷೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2012
8. ಜಿ.ಎಸ್.ಶಿವರುದ್ರಪ್ಪ – ವಿಮರ್ಶೆಯ ಪೂರ್ವ ಪಶ್ಚಿಮ, ಸಾಹಿತ್ಯ ಭಂಡಾರ, ಬೆಂಗಳೂರು, 2010